# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189–ಹೊಂಗಸಂದ್ರ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು / ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 29.03.2022 ರಂದು ಮಂಗಳವಾರ ರಂದು ಸಮಯ ಬೆಳ್ಳಿಗೆ 11.00 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.189 ಹೊಂಗಸಂದ್ರ ವಾರ್ಡ್ ಕಛೇರಿ, ಬೇಗೂರು ಮುಖ್ಯ ರಸ್ತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.

**ಉಪಸ್ಥಿತರು:**

**ಹಾಜರಿದ್ದ ಸಹಾಯಕ ಅಭಿಯಂತರರು/ ಕಾರ್ಯದರ್ಶಿ, ಸದ್ಯಸರುಗಳು,**
**ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀಮತಿ ಮಾಲತಿ | ನೋಡಲ್ ಅಧಿಕಾರಿಗಳು/ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ |
| 2 | ಶ್ರೀ ಕೆ.ಎಸ್. ರಾಮೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂ. 189, ಹೊಂಗಸಂದ್ರ |
| 3 | ಶ್ರೀ ಎಂ ಮುನಿರಾಜು | ಸದಸ್ಯರು |
| 4 | ಶ್ರೀ ನಾಗಭೂಷಣ್ ಆರ್ | ಸದಸ್ಯರು |
| 5 | ಶ್ರೀ ಕೋದಂಡರಾಮ ರೆಡ್ಡಿ | ಸದಸ್ಯರು |
| 6 | ಶ್ರೀ ಬಿ.ಎಸ್. ಕುಲಕರ್ಣಿ | ಸದಸ್ಯರು |
| 7 | ಶ್ರೀ ಕುಮಾರ್.ಎ | ಸಾರ್ವಜನಿಕರು |
| 8 | ಶ್ರೀ ನಿತಿನ್ ಕೋಟಿ | ಪಿ.ಎಸ್.ಐ, ಬೊಮ್ಮನಹಳ್ಳಿ ಪೋಲಿಸ್ ಠಾಣೆ |
| 9 | ಶ್ರೀ ಹೆಚ್ ವೆಂಕಟೇಶ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾ.ಸಂ;189 ಹೊಂಗಸಂದ್ರ |
| 10 | ಶ್ರೀ ಸಂತೋಷ ಪ್ರಸಾದ್.ಎಮ್ | ಸಹಾಯಕ ಅಭಿಯಂತರರು,ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 11 | ಶ್ರೀ ಹೆಚ್.ಆರ್ ಹರೀಶ್ | ಅರಣ್ಯ ವಲಯ ಅಧಿಕಾರಿ (ಬೊ.ವ) |
| 12 | ಶ್ರೀ ವಿನೋದ್ ಕುಮಾರ್.ಟಿ | ಕಿರಿಯ ಆರೋಗ್ಯ ಪರಿವೀಕ್ಷಕರು ವಾ.ಸಂ. 189 |
| 13 | ಶ್ರೀ ರಾಮಕೃಷ್ಣ ಆರ್ | ಕಂದಾಯ ನಿರೀಕ್ಷಕರು |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು, ಸದಸ್ಯರುಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಇಂದಿನ ಸಭೆಯಲ್ಲಿ ಚರ್ಚಿಸಲಾಗಿದ್ದು ಹಾಗೂ ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಸದಸ್ಯರು ಆಕ್ಷೇಪಿಸುತ್ತಾ ಸಭೆಯನ್ನು ಅಧ್ಯಕ್ಷರು/ನೋಡಲ್ ಅಧಿಕಾರಿರವರು ಪ್ರಾರಂಭಿಸಿದರು.

(2...)

Scanned with

- **ಬಿ.ಡಬ್ಲ್ಯೂ.ಎಸ್.ಎಸ್.ಬಿ:-**

1. ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ ಒಳಚರಂಡಿ ಪೈಪ್‌ಲೈನ್ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, ಇದುವರೆಗೂ ಪೆಚ್‌ವರ್ಕ್ಸ್ ಮಾಡಿರುವುದಿಲ್ಲ ಹಾಗೂ ರಸ್ತೆಗಳಲ್ಲಿ ಅಗೆದಿರುವ ಮಣ್ಣನ್ನು, ರಸ್ತೆ ಇಕ್ಕೆಲಗಳಲ್ಲಿ ಬಿದ್ದಿರುವ ಅವಶೇಷಗಳನ್ನು ತೆಗೆದಿರುವುದಿಲ್ಲವೆಂದು ಶ್ರೀ ಮುನಿರಾಜು, ಶ್ರೀ ನಾಗಭೂಷಣ & ಇತರೆ ಸದಸ್ಯರು ರವರು ಸಭೆಯ ಗಮನಕ್ಕೆ ತಂದು. ಈ ಬಗ್ಗೆ ಶ್ರೀ ಸಂತೋಷ ಪ್ರಸಾದ ಎಂ. ಸ.ಅ. ಬಿಡಬ್ಲ್ಯೂಎಸ್‌ಎಸ್‌ಬಿ ರವರು ಈಗಾಗಲೆ ಎಲ್ಲಾ ಕಡೆ ಡಾಂಬರೀಕರಣ ಮಾಡಲಾಗುತ್ತಿದ್ದು, ಶೀಘ್ರದಲೇ ಪೂರ್ಣಗೊಳಿಸಲಾಗುವುದೆಂದು ತಿಳಿಸಿದರು.

- **ಕಾಮಗಾರಿ:-**

1. ಹೊಂಗಸಂದ್ರ ವಾರ್ಡ್‌ನ ಡಾ|| ಅಂಬೇಡ್ಕರ್ ಸಮುದಾಯ ಭವನ ಪಕ್ಕದಲ್ಲಿರುವ ಸರ್ಕಾರಿ ಶಾಲೆಯು ಸುಮಾರು 10-15 ವರ್ಷ ಮೇಲ್ಪಟ ಕಟ್ಟಡವಾಗಿದ್ದು, ಶಿಥಿಲವಾಗಿರುವುದರಿಂದ ನವೀಕರಣಗೊಳಿಸಲು ಹಿಂದಿನ ಹಲವು ಸಭೆಗಳಲ್ಲಿ ಚರ್ಚಿಸಲಾಗಿರುವ ಬಗ್ಗೆ ಶ್ರೀ ನಾಗಭೂಷಣ ಮತ್ತು ಇತರೆ ಸದಸ್ಯರು ಇಂದಿನ ಸಭೆಯ ಗಮನಕ್ಕೆ ತಂದರು, ಈ ಬಗ್ಗೆ ಸ.ಅ. ರವರು ಈಗಾಗಲೇ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ವಲಯ-3 ಮೊದಲನೇ ಹಂತ ಬಿ.ಟಿ.ಎಂ ಬಡಾವಣೆ ದಕ್ಷಿಣ ಜಿಲ್ಲೆ ಬೆಂಗಳೂರು ಇವರಿಗೆ ದಿ: 06.07.2021 ರವರಿಗೆ ಪತ್ರ ಬರೆದಿದ್ದು, ಅವರಿಂದ ವರದಿ ಬಂದ ನಂತರ ಮುಂದಿನ ಕ್ರಮವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.
2. ವಾರ್ಡ್ ವ್ಯಾಪ್ತಿಯ ಬೇಗೂರು ಮುಖ್ಯ ರಸ್ತೆಯಲ್ಲಿ ಚರಂಡಿ ಕಾಮಗಾರಿಗಳನ್ನು ಕೈಗೊಂಡಿದ್ದು, ರಸ್ತೆಗಿಂತ ಚರಂಡಿಗಳು ಎತ್ತರ ನಿರ್ಮಿಸಿದ್ದು, ಕಲ್ವರ್ಟ್ ಅಳವಡಿಸಿರುವುದಿಲ್ಲವೆಂದು ವಾರ್ಡ್ ಸದಸ್ಯರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸ.ಅ. ರವರು ರಸ್ತೆ ಮೂಲಸೌಕರ್ಯ ಇಲಾಖೆ ರವರೊಂದಿಗೆ ಚರ್ಚಿಸಿ ಕ್ರಮಕ್ಕೈಗೊಳ್ಳುವಂತೆ ತಿಳಿಸಿದರು.

- **ಬೆಸ್ಕಾಂ:-**

1. ವಾರ್ಡ್ ವ್ಯಾಪ್ತಿಯ ಎಲ್ಲಾ ಕಡೆ ಜಿಯೋ, ಏರಟೆಲ್, ವಡಾಫೋನ್ ಮತ್ತು ಇತ್ಯಾದಿ ಟೆಲಿಕಾಂ ಸಂಸ್ಥೆಗಳಿಂದ ಕೇಬಲ್ ಅಳವಡಿಸಲು ರಸ್ತೆ ಅಗೆಯುತ್ತಿದ್ದು, ಇದರಿಂದ ಸಾರ್ವಜನಿಕರಿಗೆ, ಸ್ಥಳೀಯರಿಗೂ, ವಾಹನ ಸವಾರರಿಗೆ ಓಡಾಡಲು ಕಷ್ಟವಾಗುತ್ತಿದ್ದು, ರಸ್ತೆಯನ್ನು ಅಗೆಯುವ ಸಮಯದಲ್ಲಿ ಕುಡಿಯುವ ನೀರಿನ ಸಂಪರ್ಕ & ಒಳಚರಂಡಿ ಸಂಪರ್ಕ ಮಾರ್ಗವು ಹಾನಿ ಮಾಡುತ್ತಿದ್ದು, ಬೇಗೂರು ರಸ್ತೆ, 2ನೇ ಅಡ್ಡ ರಸ್ತೆ, ವಿವೇಕನಗರ & ಇತ್ಯಾದಿ ಪ್ರದೇಶಗಳಲ್ಲಿ ಕುಡಿಯುವ ನೀರಿನ & ಒಳಚರಂಡಿ ಸಂಪರ್ಕ ಮಾರ್ಗವು ಹಾನಿಯಾಗಿರುವುದಾಗಿ ಹಾಗೂ ಸದರಿ ಸಂಸ್ಥೆ ಹಾಗೂ ಸಂಬಂಧಪಟ್ಟ ಬೆಸ್ಕಾಂ ಇಲಾಖೆಯಿಂದ ಪ್ರಾರಂಭಿಸಲಾಗುತ್ತಿದ್ದು, ಇದರಿಂದ ಸಾರ್ವಜನಿಕರಿಗೆ, ಸ್ಥಳೀಯರಿಗೆ ಕಾಮಗಾರಿಗಳ ಬಗ್ಗೆ ಮನ್ನೆಚ್ಚರಿಕೆ ಹಾಗೂ ಮಾಹಿತಿಗಳ ಬಗ್ಗೆ ವಂಚಿತರಾಗಿದ್ದು, ಸದರಿ ವಾರ್ಡ್‌ನಲ್ಲಿ ರಸ್ತೆಗಳನ್ನು ಅಗೆಯುವರುವ ಸಂಸ್ಥೆಗಳಿಗೆ ಅನುಮತಿ ನೀಡಲಾಗಿರುವ ಬಗ್ಗೆ ವಾರ್ಡ್ ಸಭೆಯಲ್ಲಿ ಶ್ರೀ ನಾಗಭೂಷಣ, ಶ್ರೀ ಮುನಿರಾಜು ಮತ್ತು ಇತರೆ ಸದಸ್ಯರು ವಾರ್ಡ್ ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸಂಬಂಧಪಟ್ಟ ಓ.ಎಫ್.ಸಿ ರವರಿಗೆ ಪತ್ರ ಬರೆದು ಓ.ಎಫ್.ಸಿ. ಇಲಾಖೆಯಿಂದ ಅನುಮತಿ ನೀಡಲಾಗಿರುವ ಬಗ್ಗೆ ಕಾರ್ಯದರ್ಶಿ/ ಸಹಾಯಕ ಅಭಿಯಂತರರು ರವರು ಸಭೆಯಲ್ಲಿ ತಿಳಿಸಿದರು. ನೋಡಲ್ ಅಧಿಕಾರಿ/ಅಧ್ಯಕ್ಷರು ರವರು ಸ.ಕಾ.ಅ. ಮತ್ತು ಸ.ಅ ರವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲು ಕಾರ್ಯದರ್ಶಿ ರವರಿಗೆ ಸೂಚಿಸಿದರು.

- **ಬೀದಿದೀಪ:-**

1. ವಾರ್ಡ್ ವ್ಯಾಪ್ತಿಯ ಬಹುತೇಕ ಕಡೆ ಸರ್ವಿಸ್ ರಸ್ತೆಗಳಲ್ಲಿ, ಬೀದಿ ದೀಪಗಳ ನಿರ್ವಹಣೆ ಸಮರ್ಪಕವಾಗಿ ಚಾಲನೆಯಲ್ಲಿರುವುದಿಲ್ಲ, ಫಿಟ್ಟಿಂಗ್ಸ್, ಎಲ್.ಇ.ಡಿ. ಬಲ್ಬಗಳನ್ನು, ಟೈಮರ್‌ಗಳನ್ನು ಅಳವಡಿಸಲು ಸಭೆಯಲ್ಲಿ ಶ್ರೀ ಮುನಿರಾಜು, ಶ್ರೀ ಕುಮಾರ್ ಮತ್ತು ಇತರೆ ಸದಸ್ಯರು ಸಭೆಯ ಗಮನಕ್ಕೆ ತಂದರು, ಈ ಬಗ್ಗೆ ಬೀದಿ ದೀಪ ಇಲಾಖೆಯ ಸಂಬಂಧಪಟ್ಟ ಸ.ಕಾ.ನಿ.ಅ ರವರಾಗಲೀ ಸ.ಅ. ರವರು ಇಂದಿನ ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಸಭೆಯಲ್ಲಿ ಸದಸ್ಯರು ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ನೋಡಲ್ ಅಧಿಕಾರಿ/ ಅಧ್ಯಕ್ಷರು ರವರು ಸ.ಕಾ.ನಿ.ಅ. ಮತ್ತು ಸ.ಅ. ರವರಿಗೆ ಕಾರಣ ಕೇಳಿ ನೋಟಿಸ್ ಜಾರಿಮಾಡುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿದರು.

(3...)

Scanned with

- **ಬೃಹತ್ ಮಳೆ ನೀರುಗಾಲುವೆ**

1. ವಾರ್ಡ್ ವ್ಯಾಪ್ತಿಯಲ್ಲಿ ಬೇಗೂರು ಮುಖ್ಯ ರಸ್ತೆಗಳ ರಾಜಕಾಲುವೆಗಳಲ್ಲಿ ಹೂಳೆತ್ತಲು ಸಭೆಯಲ್ಲಿ ಶ್ರೀ ಮುನಿರಾಜು, ಶ್ರೀ ನಾಗಭೂಷಣ ಮತ್ತು ಇತರೆ ಸದಸ್ಯರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ನೋಡಲ್/ಅಧಿಕಾರಿ ರವರು ಸಂಬಂಧಪಟ್ಟ ಸ.ಅ. ವಿಕ್ರಾಂತ ರವರಿಗೆ ದೂರವಾಣಿ ಮುಖಾಂತರ ಹೂಳೆತ್ತಲು ಕ್ರಮ ವಹಿಸುವಂತೆ ಸೂಚಿಸಿದರು.

- **ಅರಣ್ಯ ಇಲಾಖೆ:**

1. ವಾರ್ಡ್ ವ್ಯಾಪ್ತಿಯ ಆದರ್ಶ ಬಡಾವಣೆ, ಮೈಕೋ ಬಡಾವಣೆ ರಲ್ಲಿ ಮರದ ಕೊಂಬೆಗಳು ಇಳಿ ಬಿದಿದ್ದು ಈ ಬಗ್ಗೆ ಸಂಬಂಧಪಟ್ಟ ಅರಣ್ಯ ವಲಯ ಅಧಿಕಾರಿ ನಿಯಮಿತ ಕಟಾವಣೆ ಮಾಡಿ ದೈನಂದಿನ ಕ್ರಮವಹಿಸಿರುವ ಬಗ್ಗೆ ವಾಟ್ಸ್ ಆಪ್ ಗ್ರೂಪ್‌ಗಳಲ್ಲಿ ಮಾಹಿತಿ ಹಂಚಿಕೊಳ್ಳಲು ಶ್ರೀ ಕುಲಕರ್ಣಿ ಮತ್ತು ಇತರೆ ಸದಸ್ಯರು ಸಭೆಯ ಗಮನಕ್ಕೆ ತಂದರು ಈ ಬಗ್ಗೆ ಶ್ರೀ ಹೆಚ್.ಆರ್. ಹರೀಶ್ ಅರಣ್ಯ ವಲಯ ಅಧಿಕಾರಿ ರವರು ಕ್ರಮವಹಿಸುವುದಾಗಿ ತಿಳಿಸಿದರು.

- **ಪೋಲಿಸ್ ಇಲಾಖೆ:-**

1. ವಾರ್ಡ್ ವ್ಯಾಪ್ತಿಯಲ್ಲಿ ಓಣಿ ರಸ್ತೆ ಮತ್ತು ಬೇಗೂರು ಮುಖ್ಯ ರಸ್ತೆ ಮತ್ತು ಕೊಡಿಚಿಕ್ಕನಹಳ್ಳಿ ಮುಖ್ಯ ರಸ್ತೆಗಳ ಪಾದಚಾರಿ ಮಾರ್ಗದಲ್ಲಿ ತಳ್ಳುವಗಾಡಿಗಳು ಹೆಚ್ಚಾಗಿದ್ದು, ಕೈಗಾರಿಕಾ ಪ್ರದೇಶದಾದುದರಿಂದ ಈ ರಸ್ತೆ ಮಾರ್ಕೆಟ್‌ಯಾಗಿದ್ದು, ಸಾರ್ವಜನಿಕರು, ಸವಾರರು ಈ ರಸ್ತೆ ಮಾರ್ಗದಲ್ಲಿ ಓಡಾಡಲು 30 ನಿಮಿಷದಿಂದ ಸುಮಾರು 1 ಗಂಟೆವರೆಗೂ ಪರದಾಡುತ್ತಿರುವ ಬಗ್ಗೆ ಶ್ರೀ ಕುಮಾರ್ ಮತ್ತು ಇತರೆ ಸದಸ್ಯರು ಸಭೆಯ ಗಮನಕ್ಕೆ ತಂದು. ಈ ಬಗ್ಗೆ ನೀತಿನ್ ಕೋಟಿ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಕಾಮಗಾರಿ ಇಲಾಖೆ ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರು ರವರು ದಿನಾಂಕ ನಿಗದಿಪಡಿಸಿದಲ್ಲಿ ಸದರಿ ಇಲಾಖೆಯೊಂದಿಗೆ ಸಹಕಾರ ನೀಡುವುದಾಗಿ ಹಾಗೂ ಪಾದಚಾರಿ ಮಾರ್ಗ ತೆರವು ಕಾರ್ಯಚರಣೆಗೆ ಸಹಕರಿಸುವುದಾಗಿ ತಿಳಿಸಿದರು. ಈ ಬಗ್ಗೆ ಸದಸ್ಯರು ಮಾತನಾಡುತ್ತಾ, ಪಾದಚಾರಿ ಮಾರ್ಗಗಳನ್ನು ತೆರವುಗೊಳಿಸಲು ತಿಂಗಳಿಗೊಮ್ಮೆ ಕಾರ್ಯಕ್ರಮವನ್ನ ಏರ್ಪಡಿಸಲು ತಿಳಿಸಿದರು ನೋಡಲ್ ಅಧಿಕಾರಿ/ಅಧ್ಯಕ್ಷರು ರವರು ಕ್ರಮ ವಹಿಸುವಂತೆ ಕಾಮಗಾರಿ ಇಲಾಖೆ ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

- ಆರೋಗ್ಯ ಇಲಾಖೆ

1. ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗವು ಕಡಿಮೆಯಾಗಿರುವುದರಿಂದ ವೈದ್ಯರು ನೇಮಿಸಿರುವ ಸ್ಥಳಕ್ಕೆ ಮರು ನಿಯುಕ್ತಿಗಳಿಸಿರುವುದರಿಂದ ಹಾಗೂ ವಾರ್ಡ್‌ನಲ್ಲಿ ಸಕ್ರಿಯ ಪ್ರಕರಣವು ಇಳಿಮುಖವಾಗಿರುವುದಾಗಿ ಹಾಗೂ ಪರೀಕ್ಷೆ ಮಾಡಲು ಪ್ರತಿದಿನ 180 ಟಾರ್ಗೆಟ್ ನೀಡಲಾಗಿದ್ದು, ಕೋವಿಡ್ ಪರೀಕ್ಷೆ ಮಾಡಲಾಗುತ್ತಿದೆ ಎಂದು ಶ್ರೀ ವೆಂಕಟೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ತಿಳಿಸಿದರು.
2. ಶ್ರೀ ವೆಂಕಟೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಲಸಿಕೆ ನೀಡಿರುವ ಬಗ್ಗೆ ವಿವರಿಸುತ್ತಾ ದಿನಾಂಕ: 18.03.2022 ರಿಂದ 12 ರಿಂದ 14 ವರ್ಷ ಮೇಲ್ಪಟ ವಯಸ್ಸಿನ ಮಕ್ಕಳಿಗೆ ಲಸಿಕೆಗಳನ್ನು ನೀಡಲಾಗುತ್ತಿದೆ ಎಂದು ಸಭೆಗೆ ತಿಳಿಸಿರುತ್ತಾರೆ.
3. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಮುನ್ನೆಚ್ಚರಿಕೆ ಲಸಿಕಾ ಡೋಸ್ ನೀಡುವ ಕುರಿತು ಸರ್ಕಾರದ ಆದೇಶದಂತೆ ಹಾಗೂ ರಾಷ್ಟ್ರೀಯ ತಾಂತ್ರಿಕ ಸಲಹಾ ಗುಂಪಿನ (NTAGI) ಶಿಫಾರಸ್ಸಿನಂತೆ ಈಗಾಗಲೇ 2 ಡೋಸ್ ಲಸಿಕೆ ಪಡೆದ 09 ತಿಂಗಳ (39 ವಾರಗಳ) ನಂತರ ಮುನ್ನೆಚ್ಚರಿಕೆ ಲಸಿಕಾ ಡೋಸ್ ಪಡೆಯಲು 60 ವರ್ಷ ಮೇಲ್ಪಟ್ಟ ಅಸ್ವಸ್ಥತೆ ಹೊಂದಿರುವ ಫಲಾನುಭವಿಗಳಿಗೆ ಲಸಿಕೆ ನೀಡಲಾಗುತ್ತಿರುವ ಬಗ್ಗೆ ಸಭೆಗೆ ಶ್ರೀ ವೆಂಕಟೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಸಭೆಗೆ ತಿಳಿಸಿದ್ದರು

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯಲ್ಲಿ ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿಗಳ ಅನುಪಸ್ಥಿಯಲ್ಲಿ ಕಾರ್ಯದರ್ಶಿಗಳು/ಸಹಾಯಕ ಅಭಿಯಂತರರು ರವರು ವಾರ್ಡ್ ಸಮಿತಿ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು / ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned with

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with